ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಇಂಥಾ ಸಂದರ್ಭಗಳಲ್ಲಿ ರೆವಿನ್ಯೂ ಅಧಿಕಾರಿಗಳು ಕೊಡುವ ಪ್ರಮಾಣ ಪತ್ರವನ್ನು ಮಾನ್ಯ ಮಾಡಬೇಕೆಂದು ಮಾನ್ಯ ಸಚಿವರು ಹೇಳಿದರು. ಬೆಳೆಗೆ ಎಷ್ಟು ಹಾನಿಯಾಗಿದೆ ಎನ್ನುವುದನ್ನು ತಾಂತ್ರಿಕ ಜ್ಞಾನವುಳ್ಳ ಅಧಿಕಾರಿಗಳ ಪ್ರಮಾಣ ಪತ್ರದ ಮೂಲಕ ನಿರ್ಧರ್ಸೆ ಮಾಡಬೇಕಾಗುತ್ತದೆ. ಷೇಕ್ದಾರರಿಗೆ ಮತ್ತು ತಹಶೀಲ್ದಾರರಿಗೆ ತಾಂತ್ರಿಕ ಜ್ಞಾನವಿರುವುದಿಲ್ಲ ; ಕಂದಾಯ ಹಾಕುವುದು ಅವರ ಕೆಲಸ. ಅಲ್ಲದೆ, ಜಿಲ್ಲಾಧಿಕಾರಿಯವರು ಕೃಷಿ ಅಧಿಕಾರಿಯ ಪ್ರಮಾಣ ಪತ್ರದ ಆಧಾರದ ಮೇಲೆ ಪರಿಹಾರ ಕೊಡಬೇಕೆಂದು ಸುತ್ತೋಲೆ ಹೊರಡಿಸಿದ್ದರೂ ಅವರ ಪ್ರಮಾಣ ಪತ್ರಕ್ಕೆ ಏತಕ್ಕೆ ಮಾನ್ಯತೆ ಕೊಡುವುದಿಲ್ಲ ? ಮಾನ್ಯತೆ ಕೊಡದಿದ್ದರೆ ಅದನ್ನು ಅವರಿಂದ ಏತಕ್ಕೆ ತರಿಸಬೇಕಾಗಿತ್ತು ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.— ನಾನು ಆಗಲೇ ಹೇಳಿದೆ. ಆಗ ತಾವು ಸರಿಯಾಗಿ ಕೇಳಲಿಲ್ಲವೆಂದು ಕಾಣುತ್ತದೆ. ಕೃಷಿ ಅಧಿಕಾರಿಯು ನೀಡಿದ ಪ್ರಮಾಣ ಪತ್ರದ ಆಧಾರದ ಮೇಲೆ ನಮ್ಮ ರೆವಿನ್ಯೂ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದಾಗ ಪರಿಹಾರ ಕೊಡಬಾರದಂಥವರಿಗೆಲ್ಲಾ ಪರಿಹಾರ ಕೊಡುವಂತೆ ಅವರು ಶಿಫಾರಸು ಮಾಡಿರುವುದು ಕಂಡು ಬಂದಿತು. ಆದುದರಿಂದ, ಮತ್ತೆ ರೆವಿನ್ಯೂ ಅಧಿಕಾರಿಗಳು ಆಲ್ಲಿಗೆ ಹೋಗಿ ಬಂದಮೇಲೆ, ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್ ಮತ್ತು ತಹಶೀಲ್ದಾರ್ ಅವರು ನಿರ್ಣಯ ತೆದದುಕೊಂಡಿದ್ದಾರೆ. ಬಂಪರ್ ಕ್ರಾಪ್ ಬಂದ ಕಡೆಯೂ ಪರಿಹಾರ ಕೊಡಬೇಕೆಂದು ಕೃಷಿ ಅಧಿಕಾರಿಯು ಶಿಫಾರಸ್ಸು ಮಾಡಿದ್ದರು. ಆಗ ನಮ್ಮ ರೆವಿನ್ಯೂ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ್ದಾರೆ. ಈಗ ಪರಿಹಾರಧನ ಕೊಡುವುದರಲ್ಲಿ ಏರಿಯಾ ರೆಡ್ಯೂಸ್ ಆಗಿದೆಯೇ ಹೊರತು ಬೇರೆ ಯಾವ ರೀತಿಯಿಂದ ತಳ್ಳಿಹಾಕಬೇಕೆಂದಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.— ವ್ಯವಸಾಯ ಇಲಾಖೆಯ ಅಧಿಕಾರಿಗಳು ತಪ್ಪು ವರದಿ ಬರೆದಿದ್ದಾರೆಂದು ಅರ್ಥವಾಗುತ್ತದೆ. ಆ ರೀತಿ ತಪ್ಪು ವರದಿ ಕೊಟ್ಟಂತ ಅಧಿಕಾರಿಗಳ ಮೇಲೆ ಏನೂ ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಪ್ಪು ವರದಿ ಕೊಟ್ಟಂತ ಅಧಿಕಾರಿಗಳ ಮೇಲೆ ಕ್ರಮ ತೆಗೆದು ಕೊಳ್ಳುವಂತೆ ಸಂಬಂಧಪಟ್ಟ ಖಾತೆಗೆ ಬರೆಯುತ್ತೇನೆ.

ಶ್ರೀ ವಿ. ಎಂ. ಘಾಡಿ.—೧೭೫ ಕುಟುಂಬಗಳಿಗೆ ಪರಿಹಾರಧನ ಕೊಡುವುದಕ್ಕೆ ಏತಕ್ಕೆ ತಡವಾಯಿತು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗಾಗಲೇ ಹಳಿಯಾಳ ತಹಶೀಲ್ದಾರ್ ರವರಿಗೆ ೩೦,೦೦೦ ರೂಪಾಯಿಗಳನ್ನು ೧೭೫ ಕುಟುಂಬಗಳಿಗೆ ಕೊಡುವಂತೆ ಕೊಡಲಾಗಿದೆ.

ಶ್ರೀ ಡಿ.ಟಿ. ರಾಮು.—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ತಡವಾಗಿರುವುದು ನಿಜವೆಂದು ಹೇಳಿದರು. ಆಗಾಗ್ಗೆ ಪ್ರಕೃತಿಯ ವಿಕೋಪಕ್ಕೆ ಮತ್ತು ಕ್ಷಾಮಡಾಮರಗಳಿಗೆ ಮತ್ತು ಅತಿವೃಷ್ಟಿಗೆ ಗುರಿಯಾಗತಕ್ಕಂಥ ರೈತರುಗಳಿಗೆ ಶೀಘ್ರವಾಗಿ ಪರಿಹಾರ ದನ ಕೊಡಲಿಕ್ಕೆ ಅನುಕೂಲವಾಗುವಂತೆ ಶಾಶ್ವತವಾದ ಒಂದು ಸಮಿತಿಯನ್ನು ನೇಮಕ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪರಿಹಾರಧನ ಕೊಡುವುದಕ್ಕೆ ಸಮಿತಿಯನ್ನು ನೇಮಕ ಮಾಡುವುದಿಲ್ಲ. ಕ್ಷಾಮಗಳು ಬಂದಾಗ ಯಾವ ರೀತಿ ಪರಿಹಾರ ಒದಗಿಸುವುದಕ್ಕೆ ಸಾಧ್ಯ ಎಂದು ಪರಿಶೀಲನೆ ಮಾಡಲು ಸಮಿತಿ ರಚಿಸಬೇಕೆಂದು ಮಾಡಿದ್ದೇವೆ.

Irrigation works in Mundgod Taluk

442 SR V.M. GHADI (Haliyal).—Will the Minister for Transport and Minor Irrigation be pleased to state :—

(a) the year in which the Irrigation works of Nyasargi Sannavalli and Chigali tanks in Mundgod taluks have been commissioned ;

(b) the number of acres of land that will be irrigated (tank wise) ;

(c) the progress of these tanks and how much area is getting water ;

(d) the reasons for abnormal delay in completing the works ;

(e) when these works will be completed in all respects ?

SRI M. M. J. SADYOJATHA (Minister for Transport and Minor Irrigation).—

(a) Nyasangi tank — Not commissioned.
Chigalli tank
Sannavalli tank — Commissioned during 1981-82.

(b) 1 Nyasargi tank ... 971 acres
2 Sannavalli tank ... 1835 acres
3 Chigalli tank ... 3650 acres

(c) **Progress of works** :—

1. **Nyasargi Tank**.—Bund completed, erection of steel trusseas for the outlet to be executed, wasteweir completed 3 Km. LBC completed and one CD work completed 2 Km. of RBC completed one CD work completed.

2. **Sanoavalli Tank**.—Bund waste weri, outlets are completed LBC almost completed, RBC partially completed.

3. **Chigalli Tank**.—Bund, waste weir, and outlet completed LBC completed. Distributory outlet are to be done ; 16 Km. of RBC is completed as against 16.8 Km. Two outlets are completed. Area irrigated is nil in respect of Nyasargi and Chigalli tanks. An area of 300 acres of land brought under irrigation in respect of Sannavalli Tank.

(d) 1. **Nyasargi Tank**.—The work could not be completed by M/s R. N. Shetty and Co., in time for want of finalisation of acquisition of forest lands. Hence their contract was rescinded. The balance works were taken up by several agencies like KLAC and also piece workers and they also failed to complete the same. Further balance works have been takenup departmentally and are in progress (mainly canal works). Hence delay.

2. **Sannavalli**.—The delay is due to the demise of main partner of M/s P.S. Kamath & Co., who were original contractor.

3. **Chigalli Tank**.—The delay is due to the stoppage of work by the tendered contractor due to the modified technical opinion of land trouble and also shortage of cement.

(e) End of December, 1981.

ಶ್ರೀ ವಿ. ಎಂ. ಘಾಡಿ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯ, ಮುಂದಗೂಡ ತಾಲ್ಲೂಕಿನ ನ್ಯಾಸರಗಿ, ಸನ್ನವಳ್ಳಿ ಮತ್ತು ಚಿಗಳ್ಳಿ ಕೆರೆಗಳ ನೀರಾವರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೆ ?

ಶ್ರೀ ಎಂ.ಎಂ.ಜೆ, ಸದ್ಯೋಜಾತ.—ಪ್ರಾರಂಭಿಸಲಾಗಿದೆ.

ಶ್ರೀ ವಿ. ಎಂ. ಘಾಡಿ.—ಪ್ರಾರಂಭವಾಗಿಲ್ಲವೆಂದು ಲಿಖಿತ ಉತ್ತರಕೊಟ್ಟಿದ್ದೀರಿ. ಯಾವ ವರ್ಷದಲ್ಲಿ ಪ್ರಾರಂಭಿಸಲಾಗಿದೆಯೆಂದು ತಿಳಿಸುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಕೆಲಸ ಪ್ರಗತಿಯಾಗಿ ನಡೆಯುತ್ತಿದೆ.

ಅಧ್ಯಕ್ಷರು.—ಪ್ರೋಗ್ರೆಸ್ ಆಫ್ ವರ್ಕ್ ನೋಡಿ. ಜೊತೆಗೆ ತಾವು ಇಂಗ್ಲೀಷ್ ಕಾಪಿ ನೋಡಿ.

ಶ್ರೀ ವಿ. ಎಂ. ಘಾಡಿ.—ಕನ್ನಡದಲ್ಲಿ ಯಾವ ವರ್ಷದಲ್ಲಿ ಪ್ರಾರಂಭವಾಗುತ್ತೆ, ಎಂದು ಕೇಳಿದ್ದೇನೆ.

ಅಧ್ಯಕ್ಷರು.—ಇಂಗ್ಲೀಷ್ ಓದಿ, ಕಮಿಷನ್ ಆಂತ ಬರೆದಿದ್ದೀರಿ. ತಾವು ಕಳುಹಿಸುವಾಗಲೇ ಕಮೀಷನ್ ಅಂತ ಬರೆದಿದ್ದೀರಿ.

ಶ್ರೀ ವಿ. ಎಂ. ಘಾಡಿ.—ಅದು ಒರಿಜನಲ್ ಕಾಪಿ ತಾನೆ ?

ಅಧ್ಯಕ್ಷರು.—ಹೌದು.

ಶ್ರೀ ವಿ.ಎಂ. ಘಾಡಿ.—ಕನ್ನಡದಲ್ಲಿ ಏತಕ್ಕೆ ಪ್ರಾರಂಭವಾಗುತ್ತೆ ಎಂದು ಸ್ಪಷ್ಟವಾಗಿ ಬರೆದಿದ್ದೇನೆ? ಯಾವ ವರ್ಷದಲ್ಲಿ ಕೆಲಸ ಪ್ರಾರಂಭವಾಗುತ್ತದೆಂದು ತಿಳಿಸುತ್ತೀರಾ ?

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಯಾವ ವರ್ಷದಲ್ಲಿ ಪ್ರಾರಂಭವಾಯಿತು ಎನ್ನುವ ತಾರೀಖು ನನ್ನ ಹತ್ತಿರ ಇಲ್ಲ.

ಶ್ರೀ ವಿ. ಎಂ. ಘಾಡಿ.—೧೯೭೦ನೇ ಇಸವಿಯಲ್ಲಿ ಈ ಮೂರು ಕೆರೆಗಳ ಕೆಲಸ ಪ್ರಾರಂಭವಾಯಿತು. ೧೦–೧೧ ವರ್ಷಗಳಾದರೂ ಕೆಲಸ ಪೂರ್ತಿಯಾಗಿಲ್ಲ. ಇಷ್ಟೊಂದು ತಡವಾಗುವುದಕ್ಕೆ ಕಾರಣವೇನು ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಭೂ ಸ್ವಾಧೀನದ ಕಾರ್ಯದಿಂದ ಕಂಟ್ರಾಕ್ಟರಿಂದ ಕೆಲಸ ನಿಧಾನವಾಯಿತು. ೮೧ನೇ ಡಿಸೆಂಬರ್‌ನೊಳಗೆ ಕೆಲಸ ಮುಗಿಸಿಕೊಡುತ್ತೇವೆ.

ಶ್ರೀ ವಿ. ಎಂ. ಘಾಡಿ.—ಕೆಲಸವನ್ನೇ ಪ್ರಾರಂಭಿಸಿಲ್ಲ ? ಎಂದು ಹೇಳಿ, ೮೧ನೇ ಡಿಸೆಂಬರ್ ಹೊತ್ತಿಗೆ ಹೇಗೆ ಮುಗಿಸುತ್ತೀರಿ ?

ಅಧ್ಯಕ್ಷರು.—ಡಿಸೆಂಬರ್ ಹೊತ್ತಿಗೆ ಮುಗಿಸುತ್ತೇವೆಂದು ಹೇಳಿದಾರೆ.

ಶ್ರೀ ವಿ. ಎಂ. ಘಾಡಿ.—ಸ್ವಾಮಿ, ಕಂಟ್ರಾಕ್ಟ್‌ದಾರರು ಅರ್ಧಂಬರ್ಧ ಕೆಲಸ ಮಾಡಿದ್ದಾರೆ. ಒಂದು ಕೆಲಸವನ್ನೂ ಪೂರ್ತಿಯಾಗಿ ಮಾಡಿಲ್ಲ. ಅವರಿಗೆ ಬಿಲ್ ಕೂಡ ಪೂರ್ತಿ ಮಾಡಿಲ್ಲ. ಹೀಗಾಗಿ ಮುಂದೆ ಕೆಲಸ ತೆಗೆದುಕೊಳ್ಳದೇ ಸುಮ್ಮನೇ ಇದ್ದಾರೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಕೆಲಸ ಮುಗಿಸುತ್ತೇವೆ. ಕಂಟ್ರಾಕ್ಟರ ಬಿಲ್‌ನ್ನು ಅನಂತರ ಸೆಟ್ಲ್ ಮಾಡಬಹುದು.

ಶ್ರೀ ವಿ.ಎಂ. ಘಾಡಿ.—ಕಂಟ್ರಾಕ್ಟ್‌ದಾರರು ಚಿದ್ರಚಿದ್ರವಾಗಿ ಕೆಲಸ ಮಾಡಿದ್ದಾರೆ. ಮಾಡಿರತಕ್ಕ ಕೆಲಸವನ್ನು ಸೆಟ್ಲ್ ಮಾಡಿದೆ, ಮುಂದೆ ಕೆಲಸ ತೆಗೆದುಕೊಳ್ಳುವುದಕ್ಕೆ ತೊಂದರೆಯಾಗುತ್ತದೆ. ಅವರು ಹೈಕೋರ್ಟಿಗೆ ಹೋಗಿ ರಿಟ್ ತಂದರೆ, ಕೆಲಸವೇ ನಿಂತು ಹೋಗುತ್ತೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ನನಗೆ ಕೆಲಸ ನಡೆಯುತ್ತದೆಂದು ವರದಿ ಬಂದಿದೆ.

ಶ್ರೀ ವಿ.ಎಂ. ಘಾಡಿ.—ನಾನು ಮೇ ತಿಂಗಳಲ್ಲಿ ಹೋಗಿ ಬಂದಿದ್ದೇನೆ. ಕೆಲಸ ನಡೆಯುತ್ತಿಲ್ಲ ನಿಂತಿದೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ತಪ್ಪು ಇದ್ದರೆ ವಿವರಗಳನ್ನು ತರಿಸುತ್ತೇನೆ.

ಶ್ರೀ ವಿ.ಎಂ. ಘಾಡಿ.—ಮೂರು ಕೆರೆಗಳ ಕೆಲಸವನ್ನು ನಿರ್ದಿಷ್ಟವಾಗಿ ಯಾವಾಗ ಮುಗಿಸಿ ನೀರು ಕೊಡುತ್ತೀರಾ ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಡಿಸೆಂಬರ್ ಅಂತರೊಳಗೆ ಪೂರ್ಣವಾಗಿ ಮುಗಿಸಿ ನೀರನ್ನು ಕೊಡುತ್ತೇವೆ.

ಶ್ರೀ ವಿ.ಎಂ. ಘಾಡಿ.—ನ್ಯಾಸರಗಿ ಕೆರೆಗೆ ಸಂಬಂಧಪಟ್ಟಂತೆ ಒಂದು ಸಮಸ್ಯೆ ಇದೆ. ಅರಣ್ಯ ಜಮೀನು ಇದೆ. ಇದಕ್ಕೆ ತಾವು ಏನೂ ಹೇಳಲಿಲ್ಲ. ಮತ್ತು ಅಂತರ ಡಿಸೆಂಬರ್ ಒಳಗೆ ಮೂರು ಕೆರೆಗಳನ್ನು ಅದಕ್ಕೆ ಸಂಬಂಧಪಟ್ಟ ನಾಲಾ ಕೆಲಸಗಳನ್ನು ಮುಗಿಸಿ ರೈತರಿಗೆ ನೀರು ಕೊಡುತ್ತೀರಾ?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಕೊಡುತ್ತೇವೆ.

Erecting of the statue of Late Sri Kengal Hanumanthaiah in front of Vidhana Soudha.

551. SRI H.L. THIMME GOWDA (Basavanagudi).—Will the Chief Minister be pleased to state.—

(a) the reasons for the delay in creating the statue of Late Sri Kengal Hanumanthaiah in front of Vidhana Soudha;

(b) when the Government proposes to install the said statue?

SRI R. GUNDU RAO (Chief Minister). —

(a) The question of eracting the statues of National Leaders around Vidhana Soudha with reference to the requests received from various organisation, etc., has been examined in detail and a decision has been taken to erect the statues of the following leaders.

(1) Mahatma Gandhi

(2) Pandit Jawaharlal Nehru

(3) Dr. Ambedkar

(4) Dr. M. Vishveswaraiah

(5) Sri Kengal Hanumanthaiah

Government had desired to erect the statue of late Dr. Ambedkar by the 14th April 1981 (i.e., the day of Ambedkar Jayanthi). Even though it was not possible to do so, owing to several constraints action is being taken in the matter on priority basis. As regards erection of the statues of other leaders, possible locations have been inspected and the matter is being finalised.

(b) Action will be taken as soon as possible.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಡಾಕ್ಟರ್ ಅಂಬೇಡ್ಕರ್ ಅವರ ಪ್ರತಿಮೆಯನ್ನು ಸರ್ಕಾರ ದವರು ಬಹಳ ಶೀಘ್ರವಾಗಿ ಮಾಡಿಸಿ ಅದನ್ನು ಅನಾವರಣ ಮಾಡುವ ಸ್ಥಿತಿಯಲ್ಲಿದ್ದಾರೆ. ಬಹಳ ಸಂತೋಷ. ಆ ಬಗ್ಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಅದೇ ರೀತಿ ದಿವಂಗತ ಕೆಂಗಲ್ ಹನುಮಂತಯ್ಯನವರ ಪ್ರತಿಮೆಯನ್ನು ಅನಾವರಣ ಮಾಡುವ ಬಗ್ಗೆ ಜಾಗ್ರತೆ ಮಾಡುತ್ತೇವೆಂದು ಹೇಳಿ ಆಶ್ವಾಸನೆ ಕೊಟ್ಟಿದ್ದರು ಆ ಬಗ್ಗೆಯೂ ಕೂಡ ಆದಷ್ಟು ಜಾಗ್ರತೆ ಮಾಡುತ್ತೀರಾ ಎಂದು ನಾನು ಪೂಜ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.